(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್ ಅವರು ತಮ್ಮ ಸ್ಥಾನದಲ್ಲಿ ನಿರ್ಗಮಿಸಿ ಮಾನ್ಯ ಸಭಾಧ್ಯಕ್ಷ ಪೀಠಕ್ಕೆ ಎದುರಿನ ಏಯ್ಲಿನಲ್ಲಿ (AISLE) ಓಂಟಿ ಕಾಲಿನಲ್ಲಿ ನಿಂತರು)

ಉಪಾಧ್ಯಕ್ಷರು : ಮಂಜುನಾಥ್ ಅವರ ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಾರೆ. ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ಕೈಮುಗಿದು ನಿಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರಿಗೆ ಹೇಳುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷಕರು : ಅವರು ಉತ್ತರ ಹೇಳುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ. ತಮಗೆ ವಿನಂತಿ ಮಾಡುತ್ತೇನೆ, ಇದು ಒಳ್ಳೆಯದಲ್ಲ. ಏಕೆಂದರೆ ಇಲ್ಲಿಯವರೆಗೆ ಚೆನ್ನಾಗಿ ಮಾತನಾಡಿದ್ದೀರಿ. ಒಳ್ಳೆಯ ರೀತಿಯಿಂದ ಪ್ರತಿಪಾದನೆ ಮಾಡಿದ್ದೀರಿ. ಅವರು ಉತ್ತರ ಹೇಳುತ್ತಾರೆ. ತಾವು ಇಲ್ಲಿಯವರೆಗೆ ಚೆನ್ನಾಗಿ ಮಾತನಾಡಿದ್ದೀರಿ. ದಯಮಾಡಿ ಕೂಡಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಸಭಾಪತಿಯವರೆ, ಹೊಸ ಅಧ್ಯಾಯ ಪ್ರಾರಂಭ ಮಾಡುವುದು ಬೇಡ.

ಉಪಾಧ್ಯಕ್ಷರು : ವೈ. ರಾಮಕೃಷ್ಣ ಅವರೇ, ಇದು ಸರಿಯಲ್ಲ ಎಂದು ತಾವು ದಮಯಾಡಿ ತಮ್ಮ ಸದಸ್ಯರಿಗೆ ಹೇಳಿ. ಅವರ ಸೀಟಿನಲ್ಲಿ ಕೂರುವುದಕ್ಕೆ ಹೇಳಿ. ತಾವು ದಯಮಾಡಿ ಹೇಳಿರಿ.

ಶ್ರೀ ವೈ. ರಾಮಕೃಷ್ಣ : ಜಿಲ್ಲಾ ಮಂತ್ರಿಗಳಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ : ಮಾನ್ಯ ಅಧ್ಯಕ್ಷರೆ..

ಉಪಾಧ್ಯಕ್ಷರು : ಅವರು ಕೂರುವವರೆಗೂ ದಯಮಾಡಿ ಹೇಳಬೇಡಿ. ತಾವು ದಯಮಾಡಿ ಕೂಡಿ. ನಿಮಗೆ ಸಮಾಧಾನ ಆಗದಿದ್ದರೆ ಮತ್ತೆ ಕೇಳಿ. ತಮ್ಮಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ಕೂಡಿ ಉತ್ತರಿಂದ ಸಮಾಧಾನ ಆಗದಿದ್ದರೆ ಮತ್ತೆ ಬೇಕಾದರೆ ನಿಲ್ಲಿ. ಈಗ ದಯಮಾಡಿ ಕೂಡಿ.

ಶ್ರೀ ವೈ. ರಾಮಕೃಷ್ಣ : ಸಮಾಧಾನ ಆಗದಿದ್ದರೆ ಮತ್ತೆ ಕರೆಯುತ್ತಾರೆಂತೆ ಬನ್ನಿ ಮಂಜುನಾಥ್ ಅವರೆ.

ಉಪಾಧಕ್ಷರು : ಆಹಾರ ಮಂತ್ರಿಗಳೇ, ಉತ್ತರ ಹೇಳಿ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಶಾಸಕರಾದ ಶ್ರೀ ಆಯನೂರ್ ಮಂಜುನಾಥ್ ಅವರ ವಾಕಚಾತುರ್ಯ ಚೆನ್ನಾಗಿದೆ. ಅವರು ಚೆನ್ನಾಗಿ ಮಾತನಾಡಿದರು. ಆದೆರ 1964ನೇ ಆಜ್ಞೆಯನ್ನು ಇವತ್ತು ಜಾರಿಗೆ ಕೊಟ್ಟು ಅರಣ್ಯ ಪ್ರೇದಶ ಎಂದು ಘೋಷಣೆ ಮಾಡಿ ಸಾಗು ಮಾಡಿರುವ ಜಮೀನು, ಅಡಿಕೆ ತೋಟ, ಮನೆ ಕಟ್ಟಿರುವ